ಜೀವನವನ್ನೇ ನೀಡಿದ್ದ. ಪಿಂಕಿಯ ಜೀವನದಲ್ಲಿನ ನಿರಾಸೆಯ ಮೋಡಗಳು ಕರಗತೊಡಗಿದವು. ಪಿಂಕಿ ಮನೆ ತುಂಬಾ ಓಡಾಡಿಕೊಂಡು ಎಲ್ಲರ ಆಕರ್ಷಣೆಯ ಕೇಂದ್ರವಾಗಿದ್ದಳು. ಒಂದು ಅನಾಥಮಗುವಿಗೆ ಒಂದು ಕುಟುಂಬ, ಸಮಾಜದ ಸುಖಾನುಭವ ಉಂಟಾಗತೊಡಗಿತ್ತು.

ಮೀನಾ ಆಗಾಗ ಪಿಂಕಿ ಜೊತೆ ಬೆರೆತು ಆಟವಾಡುತ್ತಿದ್ದಳು. ಪಿಂಕಿಯೂ ಕೂಡ ಮೀನಾಳನ್ನು ತಾಯಿಯ ಹಾಗೆಯೇ ಪ್ರೀತಿಸುತ್ತಿದ್ದಳು. ಚಂಪಾ ಮಾತ್ರ ಊಟ–ತಿಂಡಿಗಷ್ಟೇ ಸೀಮಿತಳಾಗಿದ್ದಳು. ಸುಂದರಲಾಲ್ ಎದುರಿಗೆ ಪ್ರೀತಿಯ ನಾಟಕವಾಡುತ್ತಿದ್ದಳು. ಪಿಂಕಿ ಈ ಮನೆಗೆ ಬಂದು ಹತ್ತಿರ ಹತ್ತಿರ ಒಂದು ವರ್ಷವಾಗುತ್ತಾ ಬಂದಿತ್ತು. ವಾಸ್ತವವಾಗಿ ಮನುಷ್ಯ ನೈಜ ಪ್ರೀತಿ–ಪ್ರೇಮ ಹಾಗೂ ಮಾನವೀಯ ಸಂವೇದನೆಯ ಹಸಿವು ಹೊಂದಿರುತ್ತಾನೆ. ಮಕ್ಕಳಂತೂ ಇಂಥ ವಿಷಯಗಳಲ್ಲಿ ಮುಗ್ಧರಾಗಿರುತ್ತಾರೆ. ಪ್ರೀತಿಯಿಂದ ಮಾತ್ರ ಅವರನ್ನು ನಮ್ಮತ್ತ ಸೆಳೆಯಬಹುದು. ಏಕೆಂದರೆ ಒಂದು ಹಸುಗೂಸು ಕೂಡ ಅಪ್ಪುಗೆಯಿಂದ ಮಾತ್ರ ತಾಯಿಯನ್ನು ಗುರುತಿಸುತ್ತದೆ.

ಇದ್ದಕ್ಕಿದ್ದ ಹಾಗೆ ಒಂದು ದಿನ ಸುಂದರಲಾಲ್‌ನ ಆರೋಗ್ಯ ಹದಗೆಟ್ಟಿತು. ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತಾದರೂ ಆರೋಗ್ಯದಲ್ಲಿ ಇಳಿತವೇ ಹೊರತು ಸುಧಾರಣೆ ಕಂಡುಬರಲಿಲ್ಲ. ಕೆಲವೇ ದಿನಗಳಲ್ಲಿ ಆತ ಕೊನೆಯುಸಿರೆಳೆದ. ಆತನ ತಂದೆ–ತಾಯಿಯವರಿಗೆ ತಲೆಮೇಲೆ ಬಂಡೆಯೇ ಉರುಳಿದಷ್ಟು ದುಃಖವಾಯಿತು. ಅವರ ದುಡಿಯುವ ಮಗ ಕೈತಪ್ಪಿ ಹೋಗಿ ಅನಾಥರಾಗಿಬಿಟ್ಟರು. ಪಿಂಕಿಯ ತಲೆಯ ಮೇಲಿನ ಆಸರೆ ಇಲ್ಲದಾಯಿತು. ಆಕೆ ಮತ್ತೆ ಅನಾಥಳಾಗಿಬಿಟ್ಟಳು.

ಸುಂದರಲಾಲ್‌ನ ಹದಿಮೂರನೇ ದಿನ ಕಳೆದ ಕೂಡಲೇ ಚಂಪಾ ಮನೆಬಿಟ್ಟು ಹೊರಟು ನಿಂತಳು. 'ಏನು ಚಂಪಾ ಮಗಳೇ? ನೀನೂ ಮನೆಬಿಟ್ಟು ಹೋದರೆ ನಮ್ಮ ಗತಿ ಏನು?' ಮಾವ ಕೇಳಿದರು.

ಚಂಪಾ ನೇರವಾಗಿಯೇ ಹೇಳಿದಳು, 'ನನ್ನ ಆಶ್ರಯದಾತನೇ ಇಲ್ಲವಾದ ಮೇಲೆ ಯಾರ ಆಶ್ರಯ ನಂಬಿ ನಾನು ಇಲ್ಲಿ ಇರಲಿ?'

'ಅಲ್ಲಾ ಚಂಪಾ, ಪಿಂಕಿಯ ಗತಿ ಏನು? ನಮ್ಮನ್ನು ನೋಡಿಕೊಳ್ಳುವವರು ಯಾರು?'

'ಅರೆ ಮಾವ, ಪಿಂಕಿ ನನ್ನೊಡಲ ಮಗಳೇನು ಅಲ್ವಲ್ಲ? ಪಿಂಕಿಗಾಗಿ ನನ್ನ ಜೀವನವನ್ನು ನಾನ್ಯಾಕೆ ಹಾಳುಮಾಡಿಕೊಳ್ಳಲಿ? ನಿಮಗೆ ನೋಡಿಕೊಳ್ಳಲು ಆಗದಿದ್ದರೆ ತಂದಲ್ಲಿಗೆ ಇವಳನ್ನು ಬಿಟ್ಟು ಬನ್ನಿ...'

ಆಗ ತಾನೇ ಅಲ್ಲಿಗೆ ಬಂದಿದ್ದ ಮೀನಾ ಚಂಪಾಳ ಮಾತು ಕೇಳಿಸಿಕೊಂಡು ಅವಾಕ್ಕಾಗಿ ಹೇಳಿದಳು, 'ಏನ್ ಹೇಳ್ತಾ ಇದ್ದೀರಿ ಚಂಪಾ? ಈ ಮನೆಯನ್ನು ಬೆಳಗಿಸುತ್ತೇನೆ ಅಂತಾ ನೀವೇ ಹೇಳಿದ್ದೀರಲ್ವಾ? ಹಾಗೇನು ಆಗಲೇ ಇಲ್ಲ. ಈಗ ಇರುವ ಜವಾಬ್ದಾರಿಯನ್ನು ಬಿಟ್ಟು ಓಡಿಹೋಗ್ತಾ ಇದ್ದೀರಲ್ಲ?'

'ಮೀನಾಜಿ, ನನ್ನ ಬದುಕಿನ ಆಶ್ರಯದಾತನಾಗಿದ್ದಾತನೇ ಇಲ್ಲ ಎಂದ ಮೇಲೆ ನಾನು ಇಲ್ಲೇನು ಮಾಡಲಿ?'



ಪಿಂಕಿ ಇವರೆಲ್ಲರ ಮಾತುಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಶಕ್ತಳಾಗಿದ್ದಳು. ಚಂಪಾಳ ಮಾತು ಕೇಳಿಸಿಕೊಂಡು ಬೇಸರಗೊಂಡಳು. ನಾನು ಮತ್ತೆ ಅನಾಥಾಶ್ರಮಕ್ಕೆ ಹೋಗಬೇಕೆ ಎಂದು ಯೋಚಿಸಲು ಪ್ರಾರಂಭಿಸಿದಳು. ಈ ಮನೆಗೆ ಬಂದ ಮೇಲೆ ಹೂವಿನ ಹಾಗೆ ಅರಳಿದ್ದ ಆಕೆ ಮುದುಡಲಾರಂಭಿಸಿದ್ದಳು. ಎಷ್ಟೋ ದಿನ ಕಾಯಿಲೆ ಬಿದ್ದವರ ಹಾಗೆ ಪಿಂಕಿಯ ಮುಖ ಕಳೆಗುಂದಿತು.

ಚಂಪಾ ಒಂದು ರಾತ್ರಿ ಮೆಲ್ಲನೆ ಮನೆಯನ್ನು ಬಿಟ್ಟುಹೋದಳು. ಹೋಗುವಾಗ ಮನೆಯಲ್ಲಿದ್ದ ಒಡವೆ, ದುಡ್ಡು ಸಹ ಒಯ್ದಿದ್ದಳು. ಬೆಳಗಾಗುತ್ತಲೇ ಈ ಸುದ್ದಿ ಮೊಹಲ್ಲಾದಲ್ಲೆಲ್ಲಾ ಹರಡಿತು. ಮೀನಾ ಸುಂದರಲಾಲ್‌ನ ತಂದೆ–ತಾಯಿಯರನ್ನು ಸಂತೈಸುತ್ತ, 'ಆಕೆ ಇಲ್ಲಿಂದ ಓಡಿಹೋಗಲು ಹಿಂದೆಯೇ ತಯಾರಿ ನಡೆಸಿದ್ದಳು ಅಂತ ಕಾಣುತ್ತೆ. ಹಾಗಾಗಿ ಅವಳನ್ನು ಹುಡುಕುವ ಪ್ರಯತ್ನ ಬೇಡ' ಎಂದು ಹೇಳಿದಳು.

'ಮಗು., ನಮ್ಮದಿನ್ನೇನು ಮುಗಿದ ಕತೆ. ಪ್ರಾಣ ಯಾವಾಗ ಹೋಗುತ್ತೋ ಏನೋ? ನಮಗೇನಾದ್ರೂ ಆಗಿಬಿಟ್ಟರೆ ಏನೂ ತಿಳಿಯದ ಈ ಮಗುವಿನ ಗತಿ ಏನು ಎಂಬುದೇ ಆತಂಕ. ಈಕೆ ಸಮಾಜದಲ್ಲಿ ಬದುಕುವುದಾದ್ರೂ ಹೇಗೆ? ಪಿಂಕಿಯನ್ನು ಮತ್ತೆ ಪುನಃ ಅನಾಥಾಶ್ರಮಕ್ಕೆ ಕಳುಹಿಸುವುದೇ ವಾಸಿ. ಅಲ್ಲಿ ಇವಳ ರಕ್ಷಣೆಯಾದ್ರೂ ಆಗುತ್ತೆ...' ವೃದ್ಧರು ನೊಂದು ನುಡಿದರು.

ಇವರ ಮಾತು ಕೇಳಿದ ಮೀನಾ, 'ಇವರು ಪಿಂಕಿಯನ್ನು ಪುನಃ ಅನಾಥಾಶ್ರಮಕ್ಕೆ